C.C. No: 235/2024
CW: 1 PW: 1

ದಿನಾಂಕ 05-04-2025 ರಂದು ಸಾಕ್ಷಿಗೆ ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸ.ಸ. ಅ. ರವರಿಂದಃ**

3 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಸಿ.ಡಿ. ಯನ್ನು 65(ಬಿ) ಪ್ರಮಾಪತ್ರಿಕೆಯೊಂದಿಗೆ ಹಾಜರುಪಡಿಸಿದ್ದು ಅದನ್ನು ನಿ.ಪಿ.9 ಎಂದು ಗುರುತಿಸಲಾಯಿತು. ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.10 ಎಂದು ರುಜುವಾತಿಗೆ ಒಳಪಟ್ಟು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದಿರುವುದರಿಂದ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಅಭಿಯೋಜಕರು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅದರಂತೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ. ಅ. ರವರಿಂದಃ**

ದೂರನ್ನು ನೀಡಿದ್ದು ಹಾಗೂ ಮಹಜರು ಆಗಿದ್ದು 2023 ರಂದು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಕೆ.ಎಸ್.ಪಿ. ರವರಿಂದಃ**

ನನ್ನ ಮೊದಲ ಮಗ 1ನೇ ಆರೋಪಿಯ ಜೊತೆ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರಿದು ಬಲವಂತವಾಗಿ ಕರೆದುಕೊಂಡುಹೋಗಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ಮಗನನ್ನು ನನಗೆ ಕೊಡಬೇಕೆಂದು ಹೇಳಿ ಮಾನ್ಯ ಪ್ರ. ಸಿ. ಜ. ಜೆಎಂಎಫ್ ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ನನ್ನ ಮಗುವನ್ನು ಒಂದು ಗಂಟೆ ಕಾಲ ನನ್ನ ಅಬಿರಕ್ಷೆಗೆ ನೀಡಿದ್ದರು . ಆ ಸಂದರ್ಭದಲ್ಲಿ ನನ್ನ ಮಗು ನನ್ನ ಬಳಿ ಬರಲು ನಿರಾಕರಿಸಿ ನಿರಂತರವಾಗಿ ಅಳುತ್ತಿದ್ದ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರಿದು ಒಂದೂವರೆ ವರ್ಷ ನನ್ನ ಬಳಿ ಇಲ್ಲದೆ ಇದ್ದುದರಿಂದ ಅಳುತ್ತಿದ್ದ ಎಂದು ಹೇಳುತ್ತಾರೆ. ಸದರಿ ನ್ಯಾಯಾಲಯದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ.

ನಾನು 1ನೇ ಆರೋಪಿಯ ವಿರುದ್ಧ ಕೌಟುಂಬಿಕ ನ್ಯಾಯಾಲಯದಲ್ಲಿ ಕ್ರಿ ಮಿಸ್ ಸಂ. 112/2023 ರಂತೆ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಈ ಮೇಲ್ಕಂಡ ಪ್ರಕರಣವನ್ನು ದಾಖಲಿಸುವುದಕ್ಕಿಂತ ಮುಂಚಿತವಾಗಿ ಮಹಿಳಾ ಠಾಣೆಗೆ ದೂರು ನೀಡಿದ್ದೆ. ನಾನು ಸದರಿ ಮಹಿಳಾ ಠಾಣೆಯಲ್ಲಿ ದೂರು ನೀಡಿದ ನಂತರ ಪೊಲೀಸರು ಹೇಳಿಕೊಟ್ಟ ಹಾಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಸಾಕ್ಷಿ

ಗೆ ಒಂದು ಫೋಟೋವನ್ನು ತೋರಿಸಲಾಗಿ ಆರಿಫ್ ಉಕ್ಕಿನಾಡಿ ಎಂದು ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿ.ಡಿ.2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಿಸಲಾಗಿ ರಿಯಾಜ್ ತೊಕ್ಕೋಟು ಎಂದು ಗುರುತಿಸಿದ್ದು ಅದನ್ನು ನಿ.ಡಿ.3 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಯಾವಾಗ ತೆಗೆದಿದ್ದು ಎಂದು ನನಗೆ ಗೊತ್ತಿಲ್ಲ. ನಿ.ಡಿ.3 ರ ಫೋಟೋವನ್ನು ಅಜಿಲಮೊಗರು ಅವರ ಫ್ಯಾಮಿಲಿ ಮನೆಗೆ ಹೋಗುವಾಗ ನಿ.ಪಿ.3 ರಲ್ಲಿರುವ ವ್ಯಕ್ತಿ ನನ್ನಲ್ಲಿ ಫೋನ್ ಮಾಡಿ ಮನೆ ಎಲ್ಲಿ ಎಂದು ಕೇಳಿರುತ್ತಾನೆ. ಆ ವ್ಯಕ್ತಿಗೆ ಬರುವಾಗಲೇ ಹೊಡೆದಿರುತ್ತಾರೆ. ನಂತರ ಪುಂಜಾಲಕಟ್ಟೆ ಠಾಣೆಗೆ ಹೋದಾಗ ಪೊಲೀಸರು ನನ್ನನ್ನು ಪೊಲೀಸರು ಠಾಣೆಗೆ ಕರೆಸಿ ವಿಚಾರಣೆ ಮಾಡಿರುತ್ತಾರೆ. ಅದಕ್ಕಿಂತ ಮುಂಚಿತವಾಗಿ ಮನೆಯಲ್ಲಿ ನಿ.ಡಿ.3 ರಲ್ಲಿ ಇರುವ ವ್ಯಕ್ತಿಗೆ ಏಕೆ ಹೊಡೆದದ್ದು ಎಂದು ಕೇಳಿದ್ದಕ್ಕೆ ಅನ್ಸರ್ ಎಂಬುವವರು ನನಗೆ ಹೊಡೆದಿರುತ್ತಾರೆ. ಸದರಿ ವಿಚಾರವನ್ನು ಪೊಲೀಸು ಠಾಣೆಯಲ್ಲಿ ನಾನು ಹೇಳಿರುತ್ತೇನೆ. ನಿ.ಡಿ.3 ರಲ್ಲಿರುವ ವ್ಯಕ್ತಿ ದಾರಿಯಲ್ಲಿ ಬರುವಾಗಲೇ ಹೊಡೆದಿರುತ್ತಾರೆ. ಆ ಸಂದರ್ಭದಲ್ಲಿ 1ನೇ ಆರೋಪಿ ವಿದೇಶದಲ್ಲಿ ಇದ್ದರು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ನನಗೆ ಸಂಬಂಧಪಟ್ಟದ್ದು ಅಲ್ಲ ಎಂದು ಹೇಳುತ್ತಾರೆ.

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ,ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.